**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,**
**ಕುಷ್ಟಗಿ ಇವರ ನ್ಯಾಯಾಲಯದಲ್ಲಿ**

ದಿನಾಂಕ : 2 ನೇ ಜುಲೈ, 2022

ಅಪರಾಧಿಕ ಪ್ರಕರಣ ಸಂಖ್ಯೆ : 577/2021

ರಾಜ್ಯ ಸರ್ಕಾರದ ಪರವಾಗಿ,

ಪೊಲೀಸ್ ಉಪ-ನಿರೀಕ್ಷಕರು,
ಹನಮಸಾಗರ ಪೊಲೀಸ್ ಠಾಣೆ,
ಕುಷ್ಟಗಿ, ಕೊಪ್ಪಳ ಜಿಲ್ಲೆ .... ಪಿರ್ಯಾಧಿದಾರರು

- ವಿರುದ್ಧ -

ಹಸನಸಾಬ ಮತ್ತು ಇತರರು .... ಆರೋಪಿಗಳು

## ದೋಷಾರೋಪಣೆ

**ಶ್ರೀ ಸತೀಶ ಬಿ., ಬಿ.ಎ., ಎಲ್ ಎಲ್.ಬಿ., ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆನ್ಯಾಯಿಕ ದಂಡಾಧಿಕಾರಿಯಾದ ನಾನು**

1. ಹಸನಸಾಬ
   ಪ್ರಾಯ : 58 ವರ್ಷ
   ತಂದೆ : ಬಂದಗಿಸಾಬ

2. ಮೈಬೂಬಸಾಬ
   ಪ್ರಾಯ : 44 ವರ್ಷ
   ತಂದೆ : ಬಂದಗಿಸಾಬ

3. ಆರೀಫ್
   ಪ್ರಾಯ : 39 ವರ್ಷ
   ತಂದೆ : ಬಂದಗಿಸಾಬ

4. ಸುಲೇಮಾನ
   ಪ್ರಾಯ : 21 ವರ್ಷ
   ತಂದೆ : ಹಸನಸಾಬ ಮೂಲಿಮನಿ

5. ರಜಮಾ ಅಹ್ಮದ್
ಪ್ರಾಯ ಃ 23 ವರ್ಷ
ತಂದೆ ಃ ಹಸನಸಾಬ ಮೂಲಿಮನಿ
ಆರೋಪಿತರ ವಾಸ ಃ ಹನಮಸಾಗರ,
ಕುಷ್ಟಗಿ ತಾಲೂಕು, ಕೊಪ್ಪಳ ಜಿಲ್ಲೆ.

**ಈ ಮೇಲ್ಕಂಡ ನಿಮ್ಮನ್ನು ಈ ಕೆಳಕಂಡಂತೆ ದೋಷಾರೋಪಿಸುತ್ತೇನೆ.**

ದಿನಾಂಕ 21.02.2021 ರಂದು ರಾತ್ರಿ 8-15 ಗಂಟೆ ಸಮಯದಲ್ಲಿ ಆರೋಪಿತರಾದ ನೀವುಗಳು ಹನಮಸಾಗರದ ಬಚಲಾಪೂರ ರವರ ಮಳಿಗೆಯ ಹತ್ತಿರ ತಕ್ಷೀರು ನಡೆಸುವ ಏಕೋದ್ದೇಶದಿಂದ ಅಕ್ರಮ ಕೂಟ ಮಾಡಿಕೊಂಡಿದ್ದು, ಆ ಮೂಲಕ ನೀವುಗಳು ಭಾರತೀಯ ದಂಡ ಸಂಹಿತೆಯ ಕಲಂ 143 ಸಹವಾಚಕ 149 ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಯೊಳಗೆ ಬರುವಂತೆ ಅಪರಾಧವನ್ನು ಮಾಡಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪ ಇದೆ.

ಎರಡನೇಯದಾಗಿ, ಈ ಮೇಲೆ ಹೇಳಿದ ದಿನ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವುಗಳು ಶಾಂತತ ಭಂಗ ದೊಂಬಿ ಮಾಡುವ ಉದ್ದೇಶದಿಂದ ಅಕ್ರಮಕೂಟ ಮಾಡಿಕೊಂಡು ಬಂದಿದ್ದು, ಆ ಮೂಲಕ ನೀವುಗಳು ಭಾರತೀಯ ದಂಡ ಸಂಹಿತೆಯ ಕಲಂ 147 ಸಹವಾಚಕ 149 ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಯೊಳಗೆ ಬರುವಂತೆ ಅಪರಾಧವನ್ನು ಮಾಡಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪ ಇದೆ.

ಮೂರನೇಯದಾಗಿ, ಈ ಮೇಲೆ ಹೇಳಿದ ದಿನ, ಸಮಯ ಹಾಗೂ ಸ್ಥಳದಲ್ಲಿ 1ನೇ ಆರೋಪಿಯು ಚಾಸಾ-2/ಇಬ್ರಾಹಿಂ ರವರಿಗೆ ಲೇ ಸೂಳೇ ಮಗನೆ ನಿಂದು ತಿಂದು ಬಾಳ ಆಗ್ಯೆತಿ ಎಂದು ಅವಾಚ್ಯ ಶಬ್ದಗಳಿಂದ ಬೈದಿದ್ದು ಮತ್ತು 5ನೇ ಆರೋಪಿಯು ಚಾಸಾ-1/ಶೈನಾಜ ಬೇಗಂ ರವರಿಗೆ ನೀನು ಬಂದಿಯಾ ಸೂಳೆ ನಿಂದು ನಿನ್ನ ಗಂಡಂದು ತಿಂದು ಬಾಳ ಆಗ್ಯೆತಿ ಎಂದು ಅವಾಚ್ಯ ಶಬ್ದಗಳಿಂದ ಬೈದಿದ್ದು, ಆ ಮೂಲಕ ನೀವುಗಳು ಭಾರತೀಯ ದಂಡ ಸಂಹಿತೆಯ ಕಲಂ 504 ಸಹವಾಚಕ 149 ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಯೊಳಗೆ ಬರುವಂತೆ ಅಪರಾಧವನ್ನು ಮಾಡಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪ ಇದೆ.

ನಾಲ್ಕನೇಯದಾಗಿ, ಈ ಮೇಲೆ ಹೇಳಿದ ದಿನ, ಸಮಯ ಹಾಗೂ ಸ್ಥಳದಲ್ಲಿ 1ನೇ ಆರೋಪಿಯು ಚಾಸಾ-2 ರವರಿಗೆ ಕೈಯಿಂದ ಎಡಕಿವಿ ಮಡ್ಡಿಗೆ ಹೊಡೆದಿದ್ದು ಮತ್ತು 2ನೇ ಆರೋಪಿಯು ಕಾಲಿನಿಂದ ತೊಡೆಗೆ ಒದ್ದಿದ್ದು ಮತ್ತು 4ನೇ ಆರೋಪಿಯು ಕೈಯಿಂದ ಬಲ

ಕಪಾಳಕ್ಕೆ ಹೊಡೆದಿದ್ದು ಹಾಗೂ 5 ನೇ ಆರೋಪಿಯು ಕೈಯಿಂದ ಎದೆಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿದ್ದು, ಆ ಮೂಲಕ ನೀವುಗಳು ಭಾರತೀಯ ದಂಡ ಸಂಹಿತೆಯ ಕಲಂ 323 ಸಹವಾಚಕ 149 ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಯೊಳಗೆ ಬರುವಂತೆ ಅಪರಾಧವನ್ನು ಮಾಡಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪ ಇದೆ.

ಐದನೇಯದಾಗಿ, ಈ ಮೇಲೆ ಹೇಳಿದ ದಿನ, ಸಮಯ ಹಾಗೂ ಸ್ಥಳದಲ್ಲಿ 3 ನೇ ಆರೋಪಿಯು ಚಾಸಾ-2 ರವರಿಗೆ ಕಟ್ಟಿಗೆಯಿಂದ ಬೆನ್ನಿಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿದ್ದು, ಆ ಮೂಲಕ ನೀವುಗಳು ಭಾರತೀಯ ದಂಡ ಸಂಹಿತೆಯ ಕಲಂ 324 ಸಹವಾಚಕ 149 ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಯೊಳಗೆ ಬರುವಂತೆ ಅಪರಾಧವನ್ನು ಮಾಡಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪ ಇದೆ.

ಆರನೇಯದಾಗಿ, ಈ ಮೇಲೆ ಹೇಳಿದ ದಿನ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವುಗಳು ಚಾಸಾ-1/ಶೈನಾಜಬೇಗಂ ಮತ್ತು ಚಾಸಾ-2/ಇಬ್ರಾಹಿಂ ರವರಿಗೆ " ಚಾಸಾ-4 ರಿಂದ 8 ರವರುಗಳು ಬಿಡಿಸಿದರು ಅಂತ ಉಳುಕೊಂಡಿದಿಯಾ ಇನ್ನೊಂದು ಸಾರಿ ಸಿಗು ನಿನ್ನ ಜೀವ ಸಹಿತ ಬಿಡುವುದಿಲ್ಲ" ಎಂದು ಜೀವ ಬೆದರಿಕೆ ಹಾಕಿದ್ದು, ಆ ಮೂಲಕ ನೀವುಗಳು ಭಾರತೀಯ ದಂಡ ಸಂಹಿತೆಯ ಕಲಂ 506 ಸಹವಾಚಕ 149 ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಯೊಳಗೆ ಬರುವಂತೆ ಅಪರಾಧವನ್ನು ಮಾಡಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪ ಇದೆ.

ಮೇಲ್ಕಂಡ ದೋಷಾರೋಪಣೆಗೆ ನೀವು ಈ ನ್ಯಾಯಾಲಯದಿಂದ ಅಧಿವಿಚಾರಣೆಗೆ ಗುರಿಯಾಗಬೇಕೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ ದ ನ್ಯಾ ದಂ., ಕುಷ್ಟಗಿ